# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಬೆಳಗಾವಿ
## ಬೆಳಗಾವಿ
## ಅಧಿಸೂಚನೆ

ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/4/2014 ದಿನಾಂಕ: **25/09/2014**

ವಿಷಯ: ಶೀಘ್ರಲಿಪಿಗಾರರ, ಬೆರಳಚ್ಚುಗಾರರ, ಬೆರಳಚ್ಚು ನಕಲುಗಾರರ, ಆದೇಶ ಜಾರಿಕಾರರು ಮತ್ತು ಸಿಪಾಯಿ ಹುದ್ದೆಗಳ ನೇಮಕಾತಿಯ ಬಗ್ಗೆ.

ಉಲ್ಲೇಖ:

1) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 128/2012, ದಿನಾಂಕ 24/09/2013.
2) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 128/2012, ದಿನಾಂಕ 21/01/2013 (ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಲಾ 112 ಎಲ್‌ಸಿಇ, ದಿ: 28-12-2012).
3) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 128/2012(s/f), ದಿನಾಂಕ 11/10/2013 (ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಲಾ 74 ಎಲ್‌ಸಿಇ 2013, ದಿ: 13-08-2013).

*****

ಮೇಲ್ಕಂಡ ಅಧಿಸೂಚನೆಯನ್ವಯ, **ಬೆಳಗಾವಿ ಜಿಲ್ಲಾ** ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ **ಶೀಘ್ರಲಿಪಿಗಾರರ, ಬೆರಳಚ್ಚುಗಾರರ, ಬೆರಳಚ್ಚುನಕಲುಗಾರರ, ಆದೇಶ ಜಾರಿಕಾರರು ಮತ್ತು ಸಿಪಾಯಿಗಳ ಹುದ್ದೆಗಳಿಗೆ** ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿಪಡಿಸಿದ ಅರ್ಜಿ ನಮೂನೆ ಬೆರಳಚ್ಚು/ಗಣಕೀಕೃತ ಪ್ರತಿಯಲ್ಲಿ ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರಹದಿಂದ ಎಲ್ಲ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿಮಾಡಿ ದಿನಾಂಕ: 25/10/2014 ರಂದು **ಸಂಜೆ 5-00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

**ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25/10/2014 ಸಂಜೆ 5-00 ಗಂಟೆ.**

ಅರ್ಜಿ ಸಲ್ಲಿಸಬೇಕಾದ ವಿಳಾಸ: **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬೆಳಗಾವಿ ಜಿಲ್ಲೆ**
**ಬೆಳಗಾವಿ.**

## I ಶೀಘ್ರಲಿಪಿಗಾರರು (Stenographers)

i) ಹುದ್ದೆಗಳ ಸಂಖ್ಯೆ : 7 (ಏಳು)

ii) ವೇತನ ಶ್ರೇಣಿಃ ರೂ. 14550-350-15600-400-17200-450-19000-500-21000-600-24600-700-26700 ಹಾಗೂ 165 ರೂ. ವಿಶೇಷ ವೇತನ ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣಃ

| | ಇತರೆ | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಮಾಜೀ ಸೈನಿಕರು | ಒಟ್ಟು |
|---|---|---|---|---|---|
| ಸಾಮಾನ್ಯ | 1 | 1 | 1 | 1 | **4** |
| ಪ್ರವರ್ಗ- IIA | -- | -- | 1 | -- | **1** |
| ಪ್ರವರ್ಗ- IIIB | -- | -- | 1 | -- | **1** |
| ಪರಿಶಿಷ್ಟ ಜಾತಿ | 1 | -- | -- | -- | **1** |
| **ಒಟ್ಟು** | **2** | **1** | **3** | **1** | **7** |

**ಶೈಕ್ಷಣಿಕ ವಿದ್ಯಾರ್ಹತೆಃ**

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

2) ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಭಾಷೆಯ ಶೀಘ್ರಲಿಪಿ ಸೀನಿಯರ್ ಮತ್ತು ಕನ್ನಡ ಹಾಗೂ ಆಂಗ್ಲ ಭಾಷೆಯ ಬೆರಳಚ್ಚು ಸೀನಿಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೋಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಹಾಗೂ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**ಅರ್ಹತಾ ಪರೀಕ್ಷೆಃ**

1) ಅಭ್ಯರ್ಥಿಗಳಿಗೆ ಕನ್ನಡ/ಇಂಗ್ಲೀಷ್ ಭಾಷೆಗಳಲ್ಲಿ ಒಂದು ನಿಮಿಷಕ್ಕೆ 120 ಶಬ್ದಗಳಂತೆ 5 ನಿಮಿಷಗಳ ಉಕ್ತಲೇಖನ ನೀಡಿ ಆಮೇಲೆ ಲಿಪ್ಯಂತರ ಮಾಡಲು ಹೇಳಲಾಗುವುದು. ಅದರ ಅವಧಿ 45 ನಿಮಿಷಗಳು

## II ಬೆರಳಚ್ಚುಗಾರರು (Typists)

i) ಹುದ್ದೆಗಳ ಸಂಖ್ಯೆ : 14 (ಹದಿನಾಲ್ಕು)

ii) ವೇತನ ಶ್ರೇಣಿಃ ರೂ.11600-200-12000-250-13000-300-14200-350-15600-400-17200-450-19000-500-21000 ಹಾಗೂ 135 ರೂ. ವಿಶೇಷ ವೇತನ ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಕನ್ನಡ ಮಾಧ್ಯಮ | ಅಂಗ ವಿಕಲರು | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|---|---|
| ಸಾಮಾನ್ಯ | 2 | 2 | 1 | 1 | 1 | **7** |
| ಪ್ರವರ್ಗ- I | -- | 1 | -- | -- | -- | **1** |
| ಪ್ರವರ್ಗ- IIA | 1 | 1 | -- | -- | -- | **2** |
| ಪ್ರವರ್ಗ- IIB | -- | 1 | -- | -- | -- | **1** |
| ಪರಿಶಿಷ್ಟ ಜಾತಿ | 1 | 1 | -- | -- | -- | **2** |
| ಪರಿಶಿಷ್ಟ ಪಂಗಡ | -- | 1 | -- | -- | -- | **1** |
| **ಒಟ್ಟು** | **4** | **7** | **1** | **1** | **1** | **14** |

**ಶೈಕ್ಷಣಿಕ ವಿದ್ಯಾರ್ಹತೆ:**

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.
2) ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಸೀನಿಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೋಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**ಅರ್ಹತಾ ಪರೀಕ್ಷೆ:**

1) ಅಭ್ಯರ್ಥಿಗೆ 15 ನಿಮಿಷಗಳ ಅವಧಿಯಂತೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಬೆರಳಚ್ಚು ಮಾಡಲು ಉಕ್ತಲೇಖನ ನೀಡಲಾಗುವುದು.

## III ಬೆರಳಚ್ಚು-ನಕಲುಗಾರರು (Typist-Copyists)

i) ಹುದ್ದೆಗಳ ಸಂಖ್ಯೆ : 05 (ಐದು)

ii) ವೇತನ ಶ್ರೇಣಿ: ರೂ. 11600-200-12000-250-13000-300-14200-350-15600-400-17200-450-19000-500-21000 ಹಾಗೂ 110 ರೂ. ವಿಶೇಷ ವೇತನ ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|
| ಸಾಮಾನ್ಯ | 1 | 1 | 1 | **3** |
| ಪ್ರವರ್ಗ- IIIA | 1 | -- | -- | **1** |
| ಪರಿಶಿಷ್ಟ ಜಾತಿ | -- | 1 | -- | **1** |
| **ಒಟ್ಟು** | **2** | **2** | **1** | **5** |

**ಶೈಕ್ಷಣಿಕ ವಿದ್ಯಾರ್ಹತೆ:**

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

2) ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಜೂನಿಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೋಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**ಅರ್ಹತಾ ಪರೀಕ್ಷೆ:**

1) ಅಭ್ಯರ್ಥಿಗೆ 15 ನಿಮಿಷಗಳ ಅವಧಿಯಂತೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಬೆರಳಚ್ಚು ಮಾಡಲು ಉಕ್ತಲೇಖನ ನೀಡಲಾಗುವುದು.

## IV ಆದೇಶ-ಜಾರಿಕಾರರು (Process-Server)

i) ಹುದ್ದೆಗಳ ಸಂಖ್ಯೆ : 22 (ಇಪ್ಪತ್ತೆರಡು)

ii) ವೇತನ ಶ್ರೇಣಿ: ರೂ. 11000-200-12000-250-13000-300-14200-350-15600-400-17200-450-19000 ಹಾಗೂ ಇತರ ಭತ್ಯೆಗಳು ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಇತರೆ | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಮಾಜೀ ಸೈನಿಕರು | ಅಂಗ ವಿಕಲರು | ಒಟ್ಟು |
|---|---|---|---|---|---|---|
| ಸಾಮಾನ್ಯ | 3 | 3 | 2 | 1 | 1+1* | **11** |
| ಪ್ರವರ್ಗ- I | 1 | | | | | **1** |
| ಪ್ರವರ್ಗ- IIA | 1 | 1 | 1 | | | **3** |
| ಪ್ರವರ್ಗ- IIB | 1 | | | | | **1** |
| ಪ್ರವರ್ಗ- IIIA | 1 | | | | | **1** |
| ಪ್ರವರ್ಗ- IIIB | 1 | | | | | **1** |
| ಪರಿಶಿಷ್ಟ ಜಾತಿ | 1 | 1 | 1 | | | **3** |
| ಪರಿಶಿಷ್ಟ ಪಂಗಡ | 1 | | | | | **1** |
| ಒಟ್ಟು | **10** | **5** | **4** | **1** | **2** | **22** |

*** Blindness or low vision**

**ಶೈಕ್ಷಣಿಕ ವಿದ್ಯಾರ್ಹತೆ:**

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

2) ಭಾರೀ ಹಾಗೂ ಲಘು ವಾಹನ ಚಾಲನಾ ಪತ್ರ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

## V ಸಿಪಾಯಿ (Peon)

i) ಹುದ್ದೆಗಳ ಸಂಖ್ಯೆ : 30 (ಮೂವತ್ತು)

ii) ವೇತನ ಶ್ರೇಣಿ: ರೂ. 9600-200-12000-250-13000-300-14200-350-14550 ಹಾಗೂ ಇತರ ಭತ್ಯೆಗಳು ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಇತರೆ | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಮಾಜೀ ಸೈನಿಕರು | ಅಂಗ ವಿಕಲರು | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|---|---|---|---|
| ಸಾಮಾನ್ಯ | 2 | 3 | 4 | 1 | 2+1* | 1 | 1 | **15** |
| ಪ್ರವರ್ಗ- I | 1 | -- | -- | -- | -- | -- | -- | **1** |
| ಪ್ರವರ್ಗ- IIA | 1 | 1 | 1 | 1 | -- | 1 | -- | **5** |
| ಪ್ರವರ್ಗ- IIB | 1 | -- | -- | -- | -- | -- | -- | **1** |
| ಪ್ರವರ್ಗ- IIIA | -- | 1 | -- | -- | -- | -- | -- | **1** |
| ಪ್ರವರ್ಗ- IIIB | 1 | 1 | -- | -- | -- | -- | -- | **2** |
| ಪರಿಶಿಷ್ಟ ಜಾತಿ | 1 | 1 | 1 | -- | -- | 1 | -- | **4** |
| ಪರಿಶಿಷ್ಟ ಪಂಗಡ | -- | 1 | -- | -- | -- | -- | -- | **1** |
| ಒಟ್ಟು | 7 | **8** | **6** | **2** | **3** | **3** | **1** | **30** |

* **Leprosy Cured Person**

**ಶೈಕ್ಷಣಿಕ ವಿದ್ಯಾರ್ಹತೆ:**

1) ಏಳನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
2) ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.
3) ಭಾರೀ ಹಾಗೂ ಲಘು ವಾಹನ ಚಾಲನಾ ಪತ್ರ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

## ಎಲ್ಲ ಹುದ್ದೆಗಳಿಗಾಗಿ ಸಾಮಾನ್ಯ ನಿಯಮಗಳು:

1) ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕಾತಿ ನಿಯಮದಂತೆ ಎರಡು ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿಡಲಾಗುವುದು

2) ಕನಿಷ್ಠ ವಯೋಮಿತಿ ದಿನಾಂಕ 25.10.2014 ರಂದು 18 ವರ್ಷ ಆಗಿರಲೇಬೇಕು ಹಾಗೂ ಗರಿಷ್ಠ ವಯೋಮೀತಿ 25.10.2014 ರಂದು

    ಸಾಮೂನ್ಯ ವರ್ಗ: 35 ವರ್ಷ
    ಪ್ರವರ್ಗ-I, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ : 40 ವರ್ಷ
    ಪ್ರವರ್ಗ IIA, IIB, IIIA, IIIB: 38 ವರ್ಷ ಮಿಕ್ಕಿರಬಾರದು.

3) ಸರ್ಕಾರೀ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜೀ ಸೈನಿಕರಿಗೆ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು. ಈ ಬಗ್ಗೆ ಮೀಸಲಾತಿ ಕೋರಿದಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು.

4) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ/ವರ್ಗಾವಣೆ ಪ್ರಮಾಣಪತ್ರ/ಜನನ ದಿನಾಂಕ ತೋರಿಸುವ ದಾಖಲೆಯ ಉದ್ಧೃತ ಭಾಗದ ಪ್ರತಿ ಸಲ್ಲಿಸಬೇಕು.

5) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I, IIA, IIB, IIIA, IIIB ಕನ್ನಡ ಮಾಧ್ಯಮ ಗಳ ಮೀಸಲಾತಿ ಪ್ರಮಾಣಪತ್ರಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದಲ್ಲಿ) ಪ್ರತಿ ಸಲ್ಲಿಸಬೇಕು.

6) ಗ್ರಾಮೀಣ ಮೀಸಲಾತಿ ಪ್ರಮಾಣಪತ್ರ ನಮೂನೆ 1 ಹಾಗೂ 2 ರಲ್ಲಿ (ಮೀಸಲಾತಿ ಕೋರಿದಲ್ಲಿ) ಪ್ರತಿ ಸಲ್ಲಿಸಬೇಕು.

7) ಶಾಲಾ/ಕಾಲೇಜಿನ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಂದ ಪಡೆದ ಒಂದು ನಡತೆ ಪ್ರಮಾಣಪತ್ರ ಹಾಗೂ ಸ್ಥಳೀಯ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ 6 ತಿಂಗಳ ಇತ್ತೀಚಿನ ಎರಡು ನಡತೆ ಪ್ರಮಾಣಪತ್ರಗಳ ಪ್ರತಿ ಸಲ್ಲಿಸಬೇಕು.

ಇತರೇ ಸೂಚನೆಗಳುಃ

1) ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗತ್ತೀಕರಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು/ಗಣಕೀಕೃತ/ನೆರಳಚ್ಚು ಪ್ರತಿಯಲ್ಲಿ ಅರ್ಜಿಯನ್ನು ತನ್ನ ಸ್ವಂತ ಕೈಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

2) **ಬೇರೆ ಬೇರೆ ವರ್ಗೀಕರಣಗಳಡಿಯಲ್ಲಿ ಮೀಸಲಾತಿ ಕೋರಿದ ಪಕ್ಷದಲ್ಲಿ ಅಭ್ಯರ್ಥಿಯು ಆಯಾ ವರ್ಗೀಕರಣದಡಿ ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.**

3) **ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು.**

4) ಅಭ್ಯರ್ಥಿಯು ಇತ್ತೀಚಿನ ಪಾಸಪೋರ್ಟ ಸೈಜಿನ ಫೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡಬೇಕು.

5) ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ಮೇಲಧಿಕಾರಿಗಳಿಂದ ಪಡೆದ ನಿರಪೇಕ್ಷಣಾ ಪ್ರಮಾಣಪತ್ರ ಲಗತ್ತಿಸಬೇಕು.

6) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜೆಯನ್ನಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

7) **ಅರ್ಜಿಯಲ್ಲಿ ಮತ್ತು ಲಕೋಟೆಯ ಮೇಲೆ ಹುದ್ದೆಯ ಹೆಸರು ಹಾಗೂ ಹುದ್ದೆಗಳ ವರ್ಗೀಕರಣ ಕಡ್ಡಾಯವಾಗಿ ತುಂಬಬೇಕು.**

8) ಅರ್ಜಿಯೊಂದಿಗೆ 5-00 ರೂಪಾಯಿ ಅಂಚೆ ಚೀಟಿ ಹೊಂದಿರುವ ಸ್ವವಿಳಾಸದ ಲಕೋಟೆ ಸಲ್ಲಿಸತಕ್ಕದ್ದು.

9) **ಶೀಘ್ರಲಿಪಿಗಾರರ/ಬೆರಳಚ್ಚುಗಾರರ/ಬೆರಳಚ್ಚುನಕಲುಗಾರರ ಹುದ್ದೆಗೆ ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿದ ಅಭ್ಯರ್ಥಿಗಳ ಹಾಗೂ ಅವರ ನಿಗದಿ ಪಡಿಸಿದ ಶೈಕ್ಷಣಿಕ ಪರೀಕ್ಷೆಗಳ ಅಂಕಗಳ ಒಟ್ಟು ಸರಾಸರಿ ಆಧಾರದ ಮೇಲೆ ಮೇರಿಟ್‌ವೈಸ್ (Meritwise) 1 : 5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಬರದೇ ಇರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗಿಲ್ಲವೆಂದು ಭಾವಿಸತಕ್ಕದ್ದು.**

10) ಆದೇಶ-ಜಾರಿಕಾರರ ಹುದ್ದೆಗೆ 1 : 25 ರ ಅನುಪಾತದಲ್ಲಿ ಮತ್ತು ಸಿಪಾಯಿ ಹುದ್ದೆಗೆ 1 : 10 ರ ಅನುಪಾತದಲ್ಲಿ ನಿಗದಿ ಪಡಿಸಿದ ಶೈಕ್ಷಣಿಕ ಪರೀಕ್ಷೆಗಳ ಅಂಕಗಳ ಒಟ್ಟು ಸರಾಸರಿ ಆಧಾರದ ಮೇಲೆ ಮೇರಿಟ್ ವೈಸ್ (Merit wise) ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಬರದೇ ಇರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗಿಲ್ಲವೆಂದು ಭಾವಿಸತಕ್ಕದ್ದು.

11) ಆಯ್ಕೆಯ ಸಂಬಂಧವಾಗಿ ಸಂದರ್ಶನಕ್ಕೆ ಅನರ್ಹರಾದ ಅಭ್ಯರ್ಥಿಗಳು ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸಲು ಅವಕಾಶವಿರುವುದಿಲ್ಲ.

12) ವಿವರಗಳನ್ನು ಕಾಲಂಗಳಲ್ಲಿ ಭರ್ತಿ ಮಾಡಿ ಬರೆದ ಅರ್ಜಿಗಳನ್ನು ಅಂಚೆ ಅಥವಾ ಕೊರಿಯರ್ ಮೂಲಕ ಅಥವಾ ಸ್ವಂತವಾಗಿ ತಂದು ಸಲ್ಲಿಸಿದಲ್ಲಿ ಈ ಕಛೇರಿಯ ವೇಳೆಯಲ್ಲಿ ಮಾತ್ರ ಸ್ವೀಕರಿಸಲಾಗುವುದು.

13) ಕೊನೆಯ ದಿನಾಂಕದ ನಂತರ ಬಂದ/ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

14) ಅಂಗವಿಕಲ ಹುದ್ದೆಗಳಿಗೆ ನಿರ್ದಿಷ್ಟಪಡಿಸಿದ ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆ ಇರುವವರನ್ನು ಆಯ್ಕೆಗೆ ಪರಿಗಣಿಸಲಾಗುವುದು.

15) ಮಾಹಿತಿಯನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ನಿಗದಿತ ಅರ್ಜಿ ನಮೂನೆಯಲ್ಲಿ ಎಲ್ಲ ಕಾಲಂಗಳನ್ನು ನಿಗದಿತ ಉತ್ತರಗಳಿಂದ ಭರ್ತಿ ಮಾಡಿರತಕ್ಕದ್ದು. ಸರಿಯಾಗಿ ಕಾಲಂಗಳನ್ನು (ಅಂಕಣಗಳನ್ನು) ಭರ್ತಿ ಮಾಡದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

16) **ಕೊನೆಯ ದಿನಾಂಕ ಅಂದರೆ ದಿನಾಂಕ: 25-10-2014ರ ಸಾಯಂಕಾಲ 5.45 ರ ಒಳಗಾಗಿ ಬಂದ/ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.**

17) ಪೂರ್ಣವಾಗಿ ಭರ್ತಿಮಾಡಿದ ಅರ್ಜಿಯ ಕೊನೆಗೆ ಅಭ್ಯರ್ಥಿಯು ಸಹಿ ಮಾಡಿರದಿದ್ದರೆ ಹಾಗೂ ಅವಶ್ಯಕವಿರುವ ದಾಖಲಾತಿಗಳ ಛಾಯಾಪ್ರತಿಗಳನ್ನು ಅರ್ಜಿಯೊಂದಿಗೆ ಹಾಜರುಪಡಿಸದಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

18) ಈ ಅಧಿಸೂಚನೆಯ ಎಲ್ಲಾ ಪ್ರಕ್ರಿಯೆಗಳನ್ನು ಕಾಲ-ಕಾಲಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿಯ ಸೂಚನಾ ಫಲಕದ (Notice Board) ಮೇಲೆ ಪ್ರಕಟಿಸಲಾಗುವುದು.

(ಪಿ.ಕೃಷ್ಣ ಭಟ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ

ಪ್ರತಿಯನ್ನು ವಿಲೇಖಾನಾಧಿಕಾರಿಗಳು ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು ಇವರಿಗೆ ಪ್ರತ್ಯೇಕ ಪತ್ರದೊಂದಿಗೆ ಸಲ್ಲಿಸಲಾಗಿದೆ .

ಪ್ರತಿಯನ್ನುಃ

1) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ____________
   (ತಮ್ಮ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕ್ರಮ ಕೈಕಗೊಳ್ಳುವಂತೆ ಕೋರಿದೆ.)
2) ಉಪನಿರ್ದೇಶಕರು, ಜಿಲ್ಲಾ ಮತ್ತು ವಾರ್ತಾ ಇಲಾಖೆ, ಬೆಳಗಾವಿ ಇವರಿಗೆ ಪತ್ರಿಕಾ ಪ್ರಕಟಣೆಗಾಗಿ.
3) ಕರ್ನಾಟಕ ರಾಜ್ಯ ಗೆಜಿಟ್ ಪ್ರಕಟಣೆಗಾಗಿ.
4) ಜಿಲ್ಲೆಯ ಎಲ್ಲಾ ತಾಲ್ಲೂಕಿನ ನ್ಯಾಯಾಲಯಗಳ ಪೀಠಾಸೀನಾಧಿಕಾರಿಗಳಿಗೆ (ಸೂಚನಾ ಫಲಕದಲ್ಲಿ ಪ್ರಕಟಿಸಲು).
5) ಈ ನ್ಯಾಯಾಲಯದ ಸೂಚನಾ ಫಲಕಕ್ಕೆ.

ನ್ಯಾಯಾಲಯದ ಆದೇಶದ ಮೇರೆಗೆ

25/9/2014

ಮುಖ್ಯ ಆಡಳಿತಾಧಿಕಾರಿಗಳು
ಜಿಲ್ಲಾ ನ್ಯಾಯಾಲಯ, ಬೆಳಗಾವಿ.

# ಅರ್ಜಿ ನಮೂನೆ

ಗೆ,
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ ಜಿಲ್ಲೆ,
ಬೆಳಗಾವಿ.

ಇತ್ತೀಚಿನ
ಪಾಸಪೋರ್ಟ
ಅಳತೆಯ ಭಾವಚಿತ್ರ
ಸ್ವಂತ ಸಹಿ ಮಾಡಿ
ಲಗತ್ತಿಸುವುದು

ಮಾನ್ಯರೇ,

ಬೆಳಗಾವಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಅಧಿಸೂಚನೆ ಸಂಖ್ಯೆಃ ಬೆಜಿನ್ಯಾ/ಆಡಳಿತ/ನೇಮಕಾತಿ/4/2014 ದಿನಾಂಕ 25-09-2014 ರ ಪ್ರಕಾರ ________________ ಹುದ್ದೆಗೆ ನಾನು ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.

| | | |
|---|---|---|
| 1. | ಅಭ್ಯರ್ಥಿಯ ಹೆಸರು | |
| 2. | ತಂದೆಯ/ತಾಯಿಯ/ಗಂಡನ ಹೆಸರು | |
| 3. | a. ಪೂರ್ಣ ವಿಳಾಸ | |
| | b. ಇ-ಮೇಲ್ ಐ.ಡಿ.ಃ | |
| | c. ದೂರವಾಣಿ/ಮೊಬೈಲ್ ಸಂಖ್ಯೆಃ | |
| 4. | a. ವಯಸ್ಸು<br>b. ಜನ್ಮ ದಿನಾಂಕ | ____________ವರ್ಷ |
| 5. | ಲಿಂಗ | ಪುರುಷ/ಮಹಿಳೆ |
| 6. | ರಾಷ್ಟ್ರೀಯತೆಃ<br>ಮತಃ<br>ಜಾತಿ/ಉಪಜಾತಿಃ | |

| 7. | ಶೈಕ್ಷಣಿಕ ವಿದ್ಯಾರ್ಹತೆಯ ವಿವರಗಳು (ಸ್ವಯಂ ದೃಢೀಕೃತ ಪ್ರಮಾಣಪತ್ರಗಳನ್ನು ಲಗತ್ತಿಸತಕ್ಕದ್ದು) | | | |
|---|---|---|---|---|
| ಉತ್ತೀರ್ಣ ಹೊಂದಿದ ಪರೀಕ್ಷಗಳು | ಉತ್ತೀರ್ಣ ಹೊಂದಿದ ವರ್ಷ ಮತ್ತು ನೊಂದಣಿ ಸಂಖ್ಯೆ | ಗರಿಷ್ಟ ಅಂಕಗಳು | ಪಡೆದಿರುವ ಅಂಕಗಳು | ಶೇಕಡಾ ವಾರು ಅಂಕಗಳು |
| ಎ. ಏಳನೇ ತರಗತಿ | | | | |
| ಬಿ. ಎಸ್‌ಎಸ್‌ಎಲ್‌ಸಿ/ತತ್ಸಮಾನ ಪರೀಕ್ಷೆ | | | | |
| ಸಿ. ಇತರೆ ವಿದ್ಯಾರ್ಹತೆಗಳು ಇದ್ದಲ್ಲಿ | | | | |
| 1. ಕನ್ನಡ ಬೆರಳಚ್ಚು ಜೂನಿಯರ್ | | | | |
| 2. ಇಂಗ್ಲೀಷ್ ಬೆರಳಚ್ಚು ಜೂನಿಯರ್ | | | | |
| 3. ಕನ್ನಡ ಬೆರಳಚ್ಚು ಸೀನಿಯರ್ | | | | |
| 4. ಇಂಗ್ಲೀಷ್ ಬೆರಳಚ್ಚು ಸೀನಿಯರ್ | | | | |
| 5. ಕನ್ನಡ ಶೀಘ್ರಲಿಪಿ ಸೀನಿಯರ್ | | | | |
| 6. ಇಂಗ್ಲೀಷ್ ಶೀಘ್ರಲಿಪಿ ಸೀನಿಯರ್ | | | | |

| | | |
|---|---|---|
| **8A.** | ಅಭ್ಯರ್ಥಿಯ ಹುದ್ದೆಯ ಯಾವ ವರ್ಗೀಕರಣಕ್ಕೆ ಅರ್ಜಿ ಸಲ್ಲಿಸುತ್ತಿರುವವರು (ಇತರೆ/ಪ.ಜಾ/ಪ್ರವರ್ಗ- I,IIA, IIB, /ಮಾಜಿ ಸೈನಿಕರು/ಅಂಗವಿಕಲ ಅಭ್ಯರ್ಥಿ) | |
| **8B.** | ಜಾತಿ/ಗ್ರಾಮೀಣ/ಮಾಜಿ ಸೈನಿಕ/ಅಂಗವಿಕಲ ಮೀಸಲಾತಿ ಸೌಲಭ್ಯ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣಪತ್ರಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಲಗತ್ತಿರುವ ಬಗ್ಗೆ ವಿವರಗಳು | |
| **9.** | ಅಭ್ಯರ್ಥಿಯು ಭಾರೀ/ಲಘು ವಾಹನ ಚಾಲನೆಯ ಲೈಸೆನ್ಸ್ ಹೊಂದಿರುವರೇ? (ಹೊಂದಿದ್ದಲ್ಲಿ ಚಾಲನೆ ಪರವಾನಗಿಯ ಸ್ವಯಂ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು) | |
| **10.** | ಸಲ್ಲಿಸಲು ಇಚ್ಛೆ ಪಡುವ ಇತರೆ ಯಾವುದಾದರೂ ವಿವರಗಳು | |

ಸ್ಥಳಃ

ದಿನಾಂಕಃ

ಅಭ್ಯರ್ಥಿಯ ಸಹಿ

## ಘೋಷಣೆ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದ್ದು ಒಂದು ವೇಳೆ ಅವು ಅಸತ್ಯವೆಂದು ಕಂಡುಬಂದಲ್ಲಿ, ತಾವು ತೆಗೆದುಕೊಳ್ಳುವ ತೀರ್ಮಾನಗಳಿಗೆ ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡರೆ ಬೆಳಗಾವಿ ಜಿಲ್ಲಾ ಘಟಕದ ಯಾವುದೇ ನ್ಯಾಯಾಲಯದಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧನಿದ್ದೇನೆ/ಸಿದ್ಧಳಿದ್ದೇನೆ.

ಸ್ಥಳ:
ದಿನಾಂಕ: ಅಭ್ಯರ್ಥಿಯ ಸಹಿ

## ಅಭ್ಯರ್ಥಿಯ ಶೈಕ್ಷಣಿಕ ಮಾಹಿತಿ

| ಪರೀಕ್ಷೆ | ಗಳಿಸಿದ ಅಂಕಗಳು | ಒಟ್ಟು ಅಂಕಗಳು | ಪ್ರತಿಶತ | ಪ್ರಮಾಣಪತ್ರದ ನಕಲನ್ನು ಹಾಜರಪಡಿಸಿದ್ದರ ವಿವರ |
|---|---|---|---|---|
| 1. ಏಳನೇ ತರಗತಿ | | | | |
| 2. ಎಸ್ ಎಸ್ ಎಲ್ ಸಿ/ತತ್ಸಮಾನ ಪರೀಕ್ಷೆ | | | | |
| 3. ಕನ್ನಡ ಬೆರಳಚ್ಚು ಜೂನಿಯರ್ | | | | |
| 4. ಇಂಗ್ಲೀಷ್ ಬೆರಳಚ್ಚು ಜೂನಿಯರ್ | | | | |
| 5. ಕನ್ನಡ ಬೆರಳಚ್ಚು ಸೀನಿಯರ್ | | | | |
| 6. ಇಂಗ್ಲೀಷ್ ಬೆರಳಚ್ಚು ಸೀನಿಯರ್ | | | | |
| 7. ಕನ್ನಡ ಶೀಘ್ರಲಿಪಿ ಸೀನಿಯರ್ | | | | |
| 8. ಇಂಗ್ಲೀಷ್ ಶೀಘ್ರಲಿಪಿ ಸೀನಿಯರ್ | | | | |

ಅಭ್ಯರ್ಥಿಯು ಸರ್ಕಾರೀ ನೌಕರನಾಗಿದ್ದ ಪಕ್ಷದಲ್ಲಿ ನೇಮಕಾತಿ ಪ್ರಾಧಿಕಾರದ ದೃಢೀಕರಣ ಪತ್ರ

ಶ್ರೀ/ಶ್ರೀಮತಿ ______________________________

ಇವರು ನಮ್ಮ ಇಲಾಖೆಯಲ್ಲಿ ದಿನಾಂಕ: ________________ ರಿಂದ ಸೇವೆ ಸಲ್ಲಿಸುತ್ತಿದ್ದು ಇವರ ನಡತೆಯು ಉತ್ತಮವಾಗಿದ್ದು ________________ ಹುದ್ದೆಗೆ ಅರ್ಹರಿರುತ್ತಾರೆ ಮತ್ತು ________________ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿದೆ.

ಸ್ಥಳ:
ದಿನಾಂಕ:

ಸಹಿ:
ಪದನಾಮ:
ಕಛೇರಿಯ ಮೊಹರು